

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕನ್ನಡ ನಾಡಿನ ಅಂಬೇಡ್ಕರ್

**ಸಾ**ರ್ವಜನಿಕ ಸ್ಮೃತಿಯು ಬಹಳ ದುರ್ಬಲವೆಂಬ ಅರ್ಥವುಳ್ಳ ನಾಣ್ಣುಡಿಯೊಂದು ಆಂಗ್ಲಭಾಷೆಯಲ್ಲಿದೆ. (Public memory is very poor). ನಿರ್ದಯ, ಜಡಭರಿತ ಸಮಾಜವು ತನಗಾಗಿ ದುಡಿದ ಮತ್ತು ಆತ್ಮ ಸಮರ್ಪಣೆ ಮಾಡಿದ ಹಿರಿಯ ಚೇತನಗಳನ್ನು ಬಹುಬೇಗ ಮರೆತುಬಿಡುತ್ತದೆ. ಅಲ್ಪಸ್ವಲ್ಪ ಸ್ಮರಣೆಯಲ್ಲಿ ಉಳಿದಿದ್ದರೆ ಅದು ಆಯಾಯ ವ್ಯಕ್ತಿಗಳನ್ನು ವರ್ಷಕ್ಕೊಮ್ಮೆ ಕೇವಲ ಯಾಂತ್ರಿಕವಾಗಿ ನೆನೆಸುವ ವಾರ್ಷಿಕ ವಿಧಿಯಾಗಿಬಿಟ್ಟಿದೆ. ಆ ಮಹಾನುಭಾವರ ಗೌರವಾರ್ಥ ಘೋಷಿಸಿದ ರಜಾದಿನಗಳನ್ನು ನಮ್ಮ ಜನರು ತುದಿಗಾಲ ಮೇಲೆ ನಿಂತು ಕಾಯುವುದು ಅವರ ಪುಣ್ಯ ಸ್ಮರಣೆಯಲ್ಲಿ ಪಾವನರಾಗಲು ಅಲ್ಲ, ತಮ್ಮ ವೈಯಕ್ತಿಕ ಕಾಮನೆಗಳನ್ನು ತೀರಿಸಿಕೊಳ್ಳಲು!

ಸರ್ಕಾರದಿಂದ ಮನ್ನಣೆ ಪಡೆದ ಸಾರ್ವಜನಿಕ ರಜಾದಿನಗಳು ಕೆಲಸದ ದಿನಗಳಂದೇ (Working days) ಬೀಳಬೇಕು. ಹಾಗಾದರೆ ಮಾತ್ರ ನಮ್ಮ ಜನರಿಗೆ ಖುಷಿ. ಇಲ್ಲದಿದ್ದರೆ ಅವರ ಅಸಹನೆ ಹೇಳತೀರದು. "ಈ ಗಾಂಧೀ ಜಯಂತಿ ಹಾಳಾದ್ದು ಭಾನುವಾರವೇ ಬೀಳಬೇಕೇ?" ಎಂದು ತಮ್ಮ ಮುಖವನ್ನು ಅಸಹ್ಯಕರವಾಗಿ ಊದಿಸಿಕೊಳ್ಳುತ್ತಾರೆ. ಇದೇ ರೀತಿ ಯಾರಾದರೂ ಹೆಸರಾಂತ ವ್ಯಕ್ತಿಗಳು ಆಕಸ್ಮಿಕವಾಗಿ ನಿಧನವಾದರೆ "ಸಾಯೋದು ಸತ್ತರು, ರಜಾದಿನವೇ ಸಾಯಬೇಕೇ, ಒಂದು ದಿನ ಹಿಂದೆ ಮುಂದೆ ಸಾಯಲು ಬರುತ್ತಿರಲಿಲ್ಲವೇ?" ಎಂದು ಹಳಹಳಿಸುವವರಿದ್ದಾರೆ. ಗತಿಸಿಹೋದ ವ್ಯಕ್ತಿಗಿಂತ ತಪ್ಪಿಹೋದ ಇನ್ನೊಂದು ರಜಾದಿನವೇ ಇವರಿಗೆ ತುಂಬಲಾರದಷ್ಟು ನಷ್ಟ! ಇವರ ಇಷ್ಟಾರ್ಥವನ್ನು ನೆರವೇರಿಸಿದರೆ ಸತ್ತವರ ಆತ್ಮಕ್ಕೆ ಚಿರಶಾಂತಿ! ಇವರ ಹಾರೈಕೆಯಂತೆಯೇ ಆ ವ್ಯಕ್ತಿ ಕೆಲಸದ ದಿನವೇ ಸತ್ತರೆನ್ನಿ! ಅವರ ಅಗಲಿಕೆಯಿಂದ ಇವರಿಗೆ ಎಷ್ಟೊಂದು ಸಹಿಸಲಾರದ ದುಃಖವಾಗುತ್ತದೆಯೆಂದರೆ ಅದನ್ನು ಮರೆಯಲು ಇವರಿಗೆ ಸಿನಿಮಾ ಮಂದಿರಗಳ ರಂಗು ರಂಗಿನ ರಜತ ಪರದೆ ನೋಡದೆ ಬೇರೆ ವಿಧಿಯಿಲ್ಲ. ತಮ್ಮ ಶೋಕವನ್ನು ವ್ಯಕ್ತಪಡಿಸಲು ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಸಾಲುಗಟ್ಟಿ ನಿಂತು ಟಿಕೆಟ್ ಸಿಗದೆ ಚಡಪಡಿಸುವ ಇವರ ಸಹಿಸಲಾರದ ದುಃಖ ಸತ್ತವರ ಆತ್ಮಕ್ಕೇ ಪ್ರೀತಿ! ಮನೆಯನ್ನು ಕಟ್ಟಿಸಿ ಮಕ್ಕಳು ಮೊಮ್ಮಕ್ಕಳ ನೆತ್ತಿಯ ಮೇಲೆ ನೆರಳು ಮಾಡಿಕೊಟ್ಟ ಅಜ್ಜ ಅಜ್ಜಿಗಳೂ ಒಳ್ಳೆಯ ನಕ್ಷತ್ರದಂದೇ ಸಾಯಬೇಕು. ಕೆಟ್ಟ ನಕ್ಷತ್ರದಲ್ಲಿ ಸತ್ತು ಒಂದು ದಿನ ಮನೆ ಬಿಡುವಂತಾದರೆಯೂ "ಸಾಯೋ ಮುದುಕ ಇಂಥಾ ಕೆಟ್ಟ ನಕ್ಷತ್ರದಲ್ಲೇ ಗೊಟಕ್ ಎನ್ನಬೇಕಿತ್ತೇ" ಎಂದು ಮನೆಮಂದಿಯೆಲ್ಲಾ ಶಪಿಸದೇ ಬಿಡುವುದಿಲ್ಲ, ಇವರ ಬುದ್ಧಿ ದಾರಿದ್ರ್ಯಕ್ಕೆ, ಅಂಧಶ್ರದ್ಧೆಗೆ ಪಾಪ, ಆ ಮುದುಕ ತಾನೇ ಏನು ಮಾಡಿಯಾನು?

ಅನೇಕ ರಸ್ತೆಗಳು ಮತ್ತು ವೃತ್ತಗಳಿಗೆ ಗತಿಸಿಹೋದ ಹಿರಿಯ ಚೇತನಗಳ ಹೆಸರುಗಳನ್ನು ಇಡುವುದು ನಾಡು-ನುಡಿಗೆ ಅವರು ಸಲ್ಲಿಸಿದ ಸೇವೆಯ ಜ್ಞಾಪಕಾರ್ಥವಾಗಿ. ಆದರೆ ರಸ್ತೆಯ ಬದಿಯಲ್ಲಿ ಅವರ ನಾಮಫಲಕಗಳನ್ನು ಕಂಡಾಗ ಆ ಧೀಮಂತ ವ್ಯಕ್ತಿಗಳು ನಡೆದುಹೋದ ದಾರಿಯಲ್ಲಿ ನಾವೂ ಹೋಗಬೇಕೆಂಬ ಆಲೋಚನೆ ಅದೆಷ್ಟು ಜನ ನಾಗರಿಕರಿಗೆ ಬರುತ್ತದೆ? ಅದೆಷ್ಟು ಜನರಿಗೆ ಅವರ ತ್ಯಾಗಮಯ ಜೀವನದ, ನಿಃಸ್ವಾರ್ಥಸೇವೆಯ ಪರಿಚಯವಾದರೂ ಇರುತ್ತದೆ? ಇಲ್ಲದಿದ್ದರೆ ತಿಳಿದುಕೊಳ್ಳಬೇಕೆಂಬ ಕುತೂಹಲವಾದರೂ ಎಷ್ಟು ಜನರಿಗೆ ಉಂಟಾಗುತ್ತದೆ? ಎಷ್ಟೋ ವೇಳೆ ಅಂತಹ ಪುಣ್ಯ ಪುರುಷರ ಹೆಸರುಗಳೆಲ್ಲಾ ಕ್ರಮೇಣ ಇಂಗ್ಲೀಷ್ ವರ್ಣಮಾಲೆಯ ಅರ್ಥವಿಲ್ಲದ ಮೂರ್‍ನಾಲ್ಕು ಅಕ್ಷರಗಳಾಗಿ ಪರಿಣಮಿಸಿ (ಎಂ.ಜಿ.ರೋಡ್, ಆರ್.ಟಿ. ನಗರ ಇತ್ಯಾದಿ) ಅವರು ಬದುಕಿದ್ದಾಗ ಜನಮನದಲ್ಲಿ ಉಂಟುಮಾಡುತ್ತಿದ್ದ ಸ್ಪಂದನ, ಭಾವತೀವ್ರತೆ ಮತ್ತು ಆಕರ್ಷಣಾ ಶಕ್ತಿಯನ್ನು ಕಳೆದುಕೊಂಡುಬಿಡುತ್ತವೆ. ಹೆಚ್ಚೆಂದರೆ ಸಿನಿಮಾಕ್ಕೊ, ಹೋಟೆಲ್ಲಿಗೋ ಹೋಗಲು ಅಥವಾ ಯಾರದಾದರೂ ಮನೆ ಆಫೀಸು ಪತ್ತೆ ಹಚ್ಚಲು ಇರುವ ಗುರುತಿನ ಫಲಕಗಳಾಗಿ ಮಾತ್ರ ಸಹಾಯಕವಾಗುತ್ತವೆ. ಒಮ್ಮೆ ಗುರುತು ಸಿಕ್ಕಮೇಲೆ ಅಭ್ಯಾಸ ಬಲದಿಂದ, ಅದೂ ಕೂಡ ದಿವ್ಯನಿರ್ಲಕ್ಷಕ್ಕೆ ಒಳಗಾದರೆ ಆಶ್ಚರ್ಯವೇನಿಲ್ಲ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿನ ಮೈಸೂರು ಮಹಾಸಂಸ್ಥಾನದಲ್ಲಿ ಮುಂದುವರಿದ ಕೆಲವರ ಆಕ್ರೋಶಕ್ಕೆ ಗುರಿಯಾಗಿದ್ದ ಎಂ. ಬಸವಯ್ಯನವರು ಕನ್ನಡ ನಾಡಿನ ಅಂಬೇಡ್ಕರ್ ಆಗಿದ್ದರೆಂದರೆ ಅವರ ಹೋರಾಟದ ಸೂಕ್ಷ್ಮ



ಪರಿಚಯ ಆಗದಿರದು. ದಟ್ಟದಾರಿದ್ರ್ಯದಿಂದ ತತ್ತರಿಸಿದ, ಬೇಸಾಯದ ಬವಣೆಯಲ್ಲಿ ಬೆನ್ನು ಮುರಿಸಿಕೊಳ್ಳುವ ನಿರಕ್ಷರಕುಕ್ಷಿಗಳಾದ ಗ್ರಾಮೀಣ ಜನರ ಬದುಕನ್ನು ಮೇಲೆತ್ತಲು ಅವರು ಮಾಡಿದ ಸಾಹಸಕಾರ್ಯ ಇತಿಹಾಸದ ಪುಟಗಳಲ್ಲಿ ಒಂದು ಅವಿಸ್ಮರಣೀಯ ಅಧ್ಯಾಯ. ಹಿಂದುಳಿದವರ, ದೀನ-ದಲಿತರ ಪರವಾಗಿ ಸಿಂಹಗರ್ಜನೆ ಮಾಡಿ ಸರಕಾರದ ಲೋಪದೋಷಗಳನ್ನು ಅಂದಿನ ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳಲ್ಲಿ ಖಂಡ-ತುಂಡವಾಗಿ ಪ್ರತಿಭಟಿಸುತ್ತಿದ್ದ ಬಸವಯ್ಯನವರು ಆಡಳಿತದ ಚುಕ್ಕಾಣಿ ಹಿಡಿದವರಿಗೆ ಸಿಂಹಸ್ವಪ್ನರಾಗಿದ್ದರು. 1914 ರಲ್ಲಿ ಸೇರಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಎಂ. ಬಸವಯ್ಯನವರು ಹಿಂದುಳಿದವರ ಏಳಿಗೆಗಾಗಿ ಮಾರ್ಗೋಪಾಯಗಳನ್ನು ಸೂಚಿಸಲು ಒಂದು ಉನ್ನತ ಮಟ್ಟದ ಸಮಿತಿಯು ನೇಮಕವಾಗಬೇಕೆಂಬ ಸಲಹೆಯನ್ನು

ಸರಕಾರದ ಮುಂದಿಟ್ಟರು. ನಂತರ ಅವರ ಆಗ್ರಹದ ಮೇರೆಗೆ 1918 ರಲ್ಲಿ ಅಂದಿನ ಮೈಸೂರು ಮಹಾರಾಜರು ಮುಖ್ಯನ್ಯಾಯಮೂರ್ತಿಗಳಾದ ಲೆಸ್ಲಿ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಎಂ. ಬಸವಯ್ಯನವರನ್ನೂ ಒಳಗೊಂಡಂತೆ ಒಂದು ಸಮಿತಿಯನ್ನು ನೇಮಕ ಮಾಡಿದರು. ಇದೇ ಮುಂದೆ ಚರಿತ್ರಾರ್ಹ ಮಿಲ್ಲರ್ ಕಮಿಟಿ ಎಂಬ ಹೆಸರನ್ನು ಪಡೆದಿದ್ದು ಇಡೀ ದೇಶದ ಇತಿಹಾಸದಲ್ಲಿ ಮೊಟ್ಟಮೊದಲ ಹಿಂದುಳಿದ ವರ್ಗದ ಆಯೋಗವೆಂಬ ಖ್ಯಾತಿಯನ್ನು ಪಡೆದಿದೆ. ಸರಕಾರದ ಹುದ್ದೆಗಳನ್ನು ಹಿಂದುಳಿದ ವರ್ಗಗಳಿಗೆ ಅದರಲ್ಲೂ ಹರಿಜನರಿಗೆ ಪ್ರಾತಿನಿಧ್ಯ ಕೊಡಬೇಕೆಂಬ ಮತ್ತು ಕೋಮುವಾರು ಸಂಖ್ಯಾಬಲಕ್ಕನುಸಾರವಾಗಿ ಹಂಚಬೇಕೆಂಬ ಇದರ ವರದಿಯು ಸ್ವತಂತ್ರಪೂರ್ವದಲ್ಲಿಯೇ ಜಾರಿಗೆ ಬಂದಿದ್ದು ಈಗಿನ ಹಿಂದುಳಿದ ವರ್ಗದ ಎಲ್ಲ ಆಯೋಗಗಳಿಗೆ ಭದ್ರ ಬುನಾದಿಯಾಗಿದೆ.

ಆಗಿನ ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಕುಂದೂರು ಹನುಮಂತಪ್ಪ ಎಂಬುವರು ಜಾತಿಯಿಂದ 'ಅಸ್ಪೃಶ್ಯ'ರಾಗಿದ್ದರೂ ನಯ-ನೀತಿ ನಡೆ ನುಡಿಗಳಲ್ಲಿ 'ಉತ್ತಮ ಕುಲ' ದಲ್ಲಿ ಹುಟ್ಟಿದವರನ್ನೂ ಮೀರಿಸಬಲ್ಲವರಾಗಿದ್ದರು. ಶಿವಮೊಗ್ಗೆಯ ಜಿಲ್ಲಾ ಬೋರ್ಡು ಸದಸ್ಯರಾಗಿದ್ದ ಅವರು ಬೆಂಗಳೂರಿಗೆ ಬಂದಾಗಲೆಲ್ಲ ಬಸವಯ್ಯನವರ ಅತಿಥಿಯಾಗಿರುತ್ತಿದ್ದರು. ಅವರ ಮನೆಯಲ್ಲಿ ಜೊತೆಗೇ ಕುಳಿತು ಊಟ ಮಾಡುತ್ತಿದ್ದರು. ಬಸವಯ್ಯನವರ ಈ ಔದಾರ್ಯ ಬೆಂಗಳೂರಿನಲ್ಲಿದ್ದ ವೀರಶೈವ ಮಠಾಧಿಪತಿಗಳಿಗೆ ಹಿಡಿಸಲಿಲ್ಲ. ಅವರಲ್ಲೊಬ್ಬರು ಲಿಂ॥ ಜೆ.ಬಿ. ಮಲ್ಲಾರಾಧ್ಯರ ಬಳಿ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ಆರಾಧ್ಯರು, "ಬಸವಣ್ಣನವರ ಪಂಥದವರಾಗಿ ನೀವು ಹೀಗೆ ಮಾತಾಡಬಾರದು, ಆಲೋಚನೆ ಸಹ ಮಾಡಬಾರದು. ಬಸವಯ್ಯನವರು ಮಾಡಬಾರದ ಕೆಲಸವನ್ನೇನೂ ಮಾಡಿಲ್ಲ, ನೀವು ಮಾಡಲಾರದುದನ್ನು ಅವರು ಮಾಡಿತೋರಿಸಿದ್ದಾರೆ" ಎಂದು ಮಾರುತ್ತರ ಕೊಟ್ಟರಂತೆ. ಬೆಂಗಳೂರಿನ ಜಯದೇವ ವಿದ್ಯಾರ್ಥಿನಿಲಯ ಮತ್ತು ಪುಟ್ಟಣ್ಣ ಚೆಟ್ಟಿ ಪುರಭವನಕ್ಕೆ ಮಹಾರಾಜರಿಂದ ನಿವೇಶನಗಳನ್ನು ಮುಂಜೂರುಮಾಡಿಸಿಕೊಟ್ಟವರು ಇದೇ ಬಸವಯ್ಯನವರು ಎಂಬುದು ಇಲ್ಲಿ ಸ್ಮರಣೀಯ.

ಬಸವಯ್ಯನವರ ಈ ಧೀರೋದಾತ್ತ ವ್ಯಕ್ತಿತ್ವವನ್ನು ಅವರು ಗತಿಸಿದ ಐವತ್ತು ವರ್ಷದ ಮೇಲೆ ಗುರುತಿಸಿದವರೆಂದರೆ ನಮ್ಮ ಪರಮಾದರಣೀಯ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಅವರ ಸಂಸ್ಮರಣೆಯಲ್ಲಿ 1969 ನೆಯ ಇಸವಿಯಲ್ಲಿ ಸಿರಿಗೆರೆಯಲ್ಲಿ "ಮೈಸೂರು ಬಸವಯ್ಯ ರೆಸಿಡೆನ್ಷಿಯಲ್ ಕಾಲೇಜ"ನ್ನ ಸ್ಥಾಪಿಸಿದರು. ಅಲ್ಲಿ ಓದುವ ಯುವಕ ಯುವತಿಯರು ಬಸವಯ್ಯನವರ ವ್ಯಕ್ತಿತ್ವದಿಂದ ಪ್ರಭಾವಿತರಾಗಲೆಂದು ಹಾರೈಸಿದರು. ಆದರೆ ಅವರ ಹೆಸರನ್ನು ಹೊಂದಿದ ಈ ಕಾಲೇಜು ಇಂದಿನ ಸೋಮಾರಿ ವಿದ್ಯಾರ್ಥಿಗಳ ಬಾಯಲ್ಲಿ ಆರಂಭದಲ್ಲಿ ವಿವರಿಸಿದಂತೆ ಇಂಗ್ಲಿಷ್ ವರ್ಣಮಾಲೆಯ ಮೂರಕ್ಷರದ ಎಂ.ಬಿ.ಆರ್. ಕಾಲೇಜಾಗಿದೆ! ಈ ಮೂರಕ್ಷರಗಳ ಹಿಂದಿನ ಮೈನವಿರೇಳುವ ಇತಿಹಾಸವೇನೆಂಬುದನ್ನು ಮೈಸೂರು ಪ್ರಾಚ್ಯಸಂಶೋಧನಾಲಯದ ನಿವೃತ್ತ ನಿರ್ದೇಶಕರಾಗಿದ್ದ ಎಚ್. ದೇವೀರಪ್ಪನವರು ಬಹಳ ಶ್ರಮವಹಿಸಿ ವಿಸ್ತೃತವಾಗಿ ಬರೆದಿರುತ್ತಾರೆ (ತರಳಬಾಳು ಪ್ರಕಾಶನ 1985). ಕಾಲದ ಕರಾಳಗರ್ಭದಲ್ಲಿ ಕಣ್ಮರೆಯಾಗಿ ಹೋಗುತ್ತಿದ್ದ ಮಹಾ ಮಾನವತಾವಾದಿ ಮೈಸೂರು ಬಸವಯ್ಯನವರನ್ನು ಮತ್ತೆ ಬದುಕಿಸಿದ್ದಾರೆ.

ಇಂತಹ ಧೀಮಂತ ವ್ಯಕ್ತಿತ್ವದ ಬಸವಯ್ಯನವರು 1920 ನೇ ಇಸವಿ ಇದೇ ಫೆಬ್ರವರಿ 11 ರಂದು ವಿಧಿವಶರಾಗಿದ್ದು ಅವರ ಮಾನವೀಯ ಸೇವೆಯನ್ನು ಇಲ್ಲಿ ಸ್ಮರಿಸಲಾಗಿದೆ.

16.2.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑